(MR. SPEAKER)

replies in time. I agree with the Chief Minister that he is taking proper steps in this direction but I would also request him that in case replies are not received within 15 days, he should take drastic action against officers in default, unless of course it involves a question of giving too much detail.

Sri B. D. JATTI.—I entirely agree.

PAPERS LAID ON THE TABLE.

Sri B. D. JATTI (Chief Minister).—I beg to lay on the Table the Suppression of Immoral Traffic in Women and Girls (Mysore) Rules, 1958 issued under Section 28 of the Suppression of Immoral Traffic in Women and Girls Act, 1958 (Central Act No. 104 of 1956).

MYSORE LAND REFORMS BILL, 1958.

Motion to consider (contd.)

ಅಧ್ಯಕ್ಷರು.—ಶ್ರೀ ಕೆಂಚಪ್ಪನವರು ಮಾತನಾಡುವುದಕ್ಕೆ ಮುಂಚೆ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ನಾವು ಈಗಾಗಲೇ ಭೂ ಸುಧಾರಣೆಯ ಮೇಲೆ ಎರಡು ದಿವಸ ಸಂಪೂರ್ಣವಾಗಿ ಚರ್ಚೆಮಾಡಿದ್ದೇವೆ. ಇದು ಮೂರನೆಯ ದಿವಸ. ಆದರೂ ಸಹ ಇಬ್ಬರು ಸದಸ್ಯರು ಮಾತ್ರ ಮಾತನಾಡಿದ್ದಾರೆ. ಈ ಪ್ರಕಾರ ಆದರೆ ನಾರ್ಮೈದು ದಿವಸ ಆದಮೇಲೆ ಆರನೆಯ ದಿವಸ ನಾನು ಮಾತನಾಡುತ್ತೇನೆ, ನಾನು ಮಾತನಾಡುತ್ತೇನೆ ಎಂದು ಎಲ್ಲರೂ ಎದ್ದು ನಿಲ್ಲುತ್ತಾರೆ. ಅದು ಗೊಂದಲಕ್ಕೆ ಹಿಡಿದು ಹೋಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡುವುದು ಸ್ವಲ್ಪ ಕಾಲದಲ್ಲಿ ಮುಗಿಸಿ ಎಂದು. ಇಂಟರ್ ನ್ಯಾಷನರ್ ಪ್ರಾಬ್ಲಮ್‌ಗಳನ್ನು 40 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತಾರೆ. ಯಾವತ್ತೂ ಒಂದೂವರೆ ಗಂಟೆಯಕಾಲ ತೆಗೆದುಕೊಂಡರೆ ಹೇಗೆ? ಸ್ವಲ್ಪದ್ದರಲ್ಲಿ ಹೇಳುವುದಕ್ಕೆ ಬರುತ್ತದೆ. ಅದನ್ನು ಕಲಿಯಬೇಕು. ವೆನ್ವರ್ನ್ ಡೆಮೊಕ್ರಸಿಯಿಂದ ಕಲಿಯುವುದು ಏನೆಂದರೆ ಸ್ವಲ್ಪ ಮಾತನಾಡುವುದು. ರಿಪೀಟ್ ಮಾಡದೆ ಮಾತನಾಡುವುದು, ಇದನ್ನು ಕಲಿಯುವ ಅವಶ್ಯಕವಿದೆ. ನಾನು ಜನರಲ್ಲಾಗಿ ರಿಕ್ವೆಸ್ಟ್ ಮಾಡುವುದು ಏನೆಂದರೆ ತೀವ್ರವಾಗಿ ಮುಗಿಸಿ ಎಂದು. ಪ್ರತಿಯೊಬ್ಬರೂ 15-20 ನಿಮಿಷಗಳಲ್ಲಿ ಮಾತನಾಡಿ ಮುಗಿಸಿದರೆ ಒಳ್ಳೆಯದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅವರು ತಿಳಿದುಕೊಳ್ಳಬೇಡವೇ?

ಅಧ್ಯಕ್ಷರು.—ಸ್ವಲ್ಪ ಮಾತನಾಡಿದರೂ ಅವರು ತಿಳಿದುಕೊಳ್ಳುತ್ತಾರೆ. ಎಲ್ಲರೂ ತಿಳಿದುಕೊಳ್ಳುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ 15 ನಿಮಿಷಗಳಿಂದ 20 ನಿಮಿಷಗಳತನಕ ಮಾತನಾಡಿ ಮುಗಿಸಿದರೆ ಒಳ್ಳೆಯದು.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಭೂಸುಧಾರಣೆ ಎನ್ನತಕ್ಕದ್ದರಲ್ಲಿ ಭೂಮಿಯಲ್ಲಿ ಹೆಚ್ಚು ಉತ್ಪತ್ತಿಯನ್ನು ಮಾಡುವುದಕ್ಕೋಸ್ಕರ ಸುಧಾರಿಸುವುದೆ, ಅಥವಾ ವ್ಯವಸಾಯದ ವಿಧಾನವನ್ನು ಸುಧಾರಿಸಿ ಅದಕ್ಕಾಗಿ ಸರ್ಕಾರದವರು ವ್ಯವಸಾಯದ ನಲಕರಣೆಗಳನ್ನು ಒದಗಿಸಿಕೊಟ್ಟು ಆ ಮೂಲಕ ದೇಶಕ್ಕೆ ಹೆಚ್ಚು ಆಹಾರವನ್ನು ಬೆಳೆಸುವುದೆ, ಅಥವಾ ೈತರ ಆರ್ಥಿಕ ವ್ಯವಸ್ಥೆಯನ್ನು ಸುಧಾರಣೆ ಗೊಳಿಸಿ ಭೂಮಿಯನ್ನು ಹಂಚುವಾಗ ಯಾವ ರೀತಿ ಹಂಚಿದರೆ ಸರಿಹೋಗುತ್ತದೆ ಎನ್ನುವುದೇ, ಇವು ಯಾವುದಾದರೂ ಇದರಲ್ಲಿ ಅಡಕವಾಗಿವೆಯೆ ಎಂದು ನೊಡಿದರೆ, ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಏನೇನೂ ಹೇಳಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನನಗೆ ಅನೇಕ ಜನರು ಹೇಳಿದ್ದಾರೆ. "It is essentially associated with the conception of agrarian revolution" ಎಂದು. ಅಗ್ರೇರಿಯನ್ ರೆವಲ್ಯೂಷನ್ ಎಂದರೆ, ಜಮೀನಿನ ಉತ್ಪಾದನೆಯನ್ನು ಯಾವ ರೀತಿ ಹೆಚ್ಚು ಮಾಡಬೇಕು ಎನ್ನುವುದು ಉದ್ಭವಿಸುತ್ತದೆ ಭೂಮಿಯನ್ನು ಯಾವರೀತಿ ಹಂಚಬೇಕು ಎನ್ನುವ ಪ್ರಶ್ನೆ ಉದ್ಭವಿಸಬಹುದು. ಗೇಣಿ ಕಾಯಿದೆಯನ್ನು ಸುಧಾರಿಸುವುದಕ್ಕೆ ನೇಮಕವಾದ ಸಮಿತಿಯ ರಿಪೋರ್ಟಿನಲ್ಲಿ ಇದನ್ನೆರ್ಲಾ ಅಳವಡಿಸಿದ್ದಾರೆ. ಹಿಂದೆ ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಜಮೀನು ಹಿಡುವಳಿದಾರರು ಎಷ್ಟು ಜನಗಳು ಇದ್ದಾರೆ, ಜಮೀನು ಇಲ್ಲದವರಿಗೆ ಜಮೀನನ್ನು ಯಾವರೀತಿ ಹಂಚಬೇಕು ಎನ್ನುವುದನ್ನು ಹೇಳಿದ್ದಾರೆ. ಟೆನೆಂಟ್ಸ್ ಕಲ್ಟಿವೇಟ್ ಮಾಡತಕ್ಕದ್ದು 61·4 ಲಕ್ಷ ಎಕರೆ, ಸರ್‌ಪ್ಲೆಸ್ ಲ್ಯಾಂಡನ್ನು ಟೆನೆಂಟ್ ಅಲ್ಲದೆ ಇರುವವರಿಗೆ ಕೊಡುವುದು ಎರಡುಲಕ್ಷ, ಇದಕ್ಕೋಸ್ಕರ 30·8 ಕೋಟಿ ರೂಪಾಯಿಗಳ ಕಾಂಪೆನ್‌ಸೇಷನ್ ಕೊಡಬೇಕು ಎಂದು ಹೇಳಿದ್ದಾರೆ. ಆದರೆ ಈ ಭೂ ಸುಧಾರಣೆಯಲ್ಲಿ ನಾವು ಆಲೋಚನೆ ಮಾಡತಕ್ಕದ್ದು ಬಂಜರು ಜಮೀನು ಎಷ್ಟು ಇದೆ ಎನ್ನುವುದು. ನಮ್ಮ ಸಂಸ್ಥಾನದಲ್ಲಿ ಬಂಜರು ಜಮೀನು ಎಷ್ಟು ಇದೆ, ಜಮೀನು ಇಲ್ಲದೆ ಇದ್ದರೂ ಸಹ ಜಮೀನಿನಿಂದ ಜೀವನ ಮಾಡಬೇಕು ಎನ್ನುವ ಆಶೆಯಿಂದ ಜಮೀನನ್ನು ಹೊಂದಬೇಕು ಎನ್ನುವ ಜನಗಳ ಸಂಖ್ಯೆ ಎಷ್ಟು ಇದೆ, ಅದನ್ನು ಹೇಳದೆ ಹೋಗಿರುವುದರಿಂದ, ಯಾವರೀತಿ ಹಳ್ಳಿಗಾಡಿನ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಸಹಾಯವಾದೀತು ಎನ್ನತಕ್ಕ ವಿಚಾರವನ್ನು ನಾವು ಆಲೋಚನೆ ಮಾಡಬೇಕು. ಅದು ಎಲ್ಲೂ ಇಲ್ಲ. ಅದು ಇಲ್ಲದಿದ್ದರೂ ಸಹ ಯಾವುದಾದರೂ ಒಂದು ರೀತಿಯಾಗಿ ನಾವು ಈ ಪದ್ಧತಿಯನ್ನು ತಂದು ನಮ್ಮ ದೇಶದಲ್ಲಿ ಹಳ್ಳಿಯ ಜನರ ಆರ್ಥಿಕ ವ್ಯವಸ್ಥೆಯನ್ನು ಹೇಗೆ ಸುಧಾರಿಸುತ್ತೇವೆ ಮತ್ತು ಅದರಲ್ಲೂ ವ್ಯವಸಾಯದಿಂದ ಜೀವನ ಮಾಡಬೇಕು ಎನ್ನತಕ್ಕ ನಿರುದ್ಯೋಗಿಗಳು ಅಥವಾ ಜಮೀನು ಇಲ್ಲದೇ ಇರುವವರಿಗೆ ಯಾವರೀತಿ ಜಮೀನನ್ನು ಒದಗಿಸುವುದರ ಮೂಲಕ ಸಮಾಜವಾದಿ ತತ್ವವನ್ನು ನಾವು ಹೇಗೆ ಸಾಧನೆ ಮಾಡುತ್ತೇವೆ ಎನ್ನುವುದು ಇದರಲ್ಲಿ ಕಂಡುಬರುವುದಿಲ್ಲ.